# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಮೇ 2021**, ಬೆಂಗಳೂರು, ಸಂಪುಟ 7, ಸಂಚಿಕೆ 1 ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 May 2021**, Bengaluru, Vol. 7, No.1, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


**ಧಮ್ಮ ಪದಗಳು**

ಚರಂತಿ ಬಾಲಾ ದುಮ್ಮೆಧಾ,
ಅಮಿತ್ತೇನೇವ ಅತ್ತನಾ ;
ಕರೊಂತಾ ಪಾಪಕಂ ಕಮ್ಮಂ,
ಯಂ ಹೋತಿ ಕಟುಕಪ್ಫಲಂ.

ಸ್ವಲ್ಪವೂ ಲಕ್ಷ್ಯವಿಲ್ಲದ ಮೂರ್ಖರು ಕಹಿ ಫಲವನ್ನು ನೀಡುವ ಪಾಪಕರ್ಮಗಳನ್ನು ಮಾಡುತ್ತಾ ಅಲೆದಾಡುತ್ತಿರುತ್ತಾರೆ. ಹಾಗಾಗಿ ತಮಗೆ ತಾವೇ ಶತ್ರುಗಳಾಗುತ್ತಾರೆ.

ಧಮ್ಮಪದ –66, ಬಾಲ ವಗ್ಗ

# ಬುದ್ಧರ ಬೋಧನೆ ಏನು?

**(ಸಾರ್ವಜನಿಕ ಭಾಷಣ 1, ಭಾಗ 1, ಸೆಪ್ಟಂಬರ್ 23, 1951)**

**ಸನ್ಮಾನ್ಯ ಶ್ರೀ ಸಯಾಜಿ ಉ ಬಾ ಖಿನ್**

**(ಮಾರ್ಚ್ 2018ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ)**

**(1951ರಲ್ಲಿ ಸಯಾಜಿಯವರು ಬರ್ಮಾ ದೇಶದ ಮಹಾಲೇಖಪಾಲರಾಗಿದ್ದಾಗ (ಅಕೌಂಟೆಂಟ್ ಜನರಲ್) ಧಾರ್ಮಿಕ ಅಧ್ಯಯನ ತಂಡವೊಂದು, ಬುದ್ಧರ ಬೋಧನೆಗಳ ಬಗ್ಗೆ ಉಪನ್ಯಾಸ ನೀಡಲು ಅವರನ್ನು ವಿನಂತಿಸಿತು. ಅಮೆರಿಕ ಸರ್ಕಾರದ ವಿಶೇಷ ತಾಂತ್ರಿಕ ಮತ್ತು ಆರ್ಥಿಕ ವಿಭಾಗದ ಮಾಹಿತಿ ಅಧಿಕಾರಿ ಮತ್ತು ಆರ್ಥಿಕ ಮತ್ತು ಹಣಕಾಸು ಅಧಿಕಾರಿಯು ಈ ಅಧ್ಯಯನ ತಂಡದ ಮುಖ್ಯಸ್ಥರಾಗಿದ್ದರು. ಸಯಾಜಿಯವರು ರಂಗೂನಿನ ಸಿಗ್ನಲ್ ಪಗೋಡ ರಸ್ತೆಯಲ್ಲಿರುವ ಮೆಥಾಡಿಸ್ಟ್ ಚರ್ಚ್‌ನಲ್ಲಿ ಮೂರು ಸರಣಿ ಉಪನ್ಯಾಸಗಳನ್ನು ನೀಡಿದರು. ಈ ಮುಂದಿನದನ್ನು ಸಂಕ್ಷೇಪಗೊಳಿಸಲಾಗಿದೆ.)**

ನನ್ನ ಪ್ರೀತಿಯ ಧರ್ಮ ಸಹೋದರರೇ ಮತ್ತು ಸಹೋದರಿಯರೇ!

ಇಂದು ನಾನು ನಿಮ್ಮ ಮಧ್ಯೆ ಇರುವುದು ಮತ್ತು "ಬುದ್ಧರ ಬೋಧನೆ ಏನು?" ಎಂಬ ವಿಷಯದ ಮೇಲೆ ನಿಮಗೆ ಉಪನ್ಯಾಸ ನೀಡುವ ಈ ಅವಕಾಶ, ಇದು ನನ್ನ ಮಹಾಸೌಭಾಗ್ಯ ಎಂದು ಪರಿಗಣಿಸುತ್ತೇನೆ. ಮೊಟ್ಟ ಮೊದಲನೆಯದಾಗಿ, ನಿಮ್ಮ ಜೊತೆ ನಾನು ಬಹಳ ಪ್ರಾಮಾಣಿಕವಾಗಿ ಕೆಲವು ವಿಷಯಗಳನ್ನು ಹಂಚಿಕೊಳ್ಳಬೇಕು. ನಾನು ವಿಶ್ವವಿದ್ಯಾನಿಲಯದಲ್ಲಿ ಕಲಿತವನಲ್ಲ ಮತ್ತು ನನ್ನ ವಿಜ್ಞಾನದ ಜ್ಞಾನವು ಸಾಮಾನ್ಯ ಮನುಷ್ಯನಿಗಿರುವಷ್ಟು ಮಾತ್ರ. ನಾನು ಬುದ್ಧರ ಬೋಧನೆಗಳ ಸೈದ್ಧಾಂತಿಕ ವಿಷಯಗಳಲ್ಲಿ ಪರಿಣಿತನೂ ಅಲ್ಲ ಮತ್ತು ತಿಪಿಟಕಗಳನ್ನು (ತಿಪಿಟಕಗಳ ಶಬ್ದಾರ್ಥವು ಬೌದ್ಧ ಧರ್ಮದ "ಮೂರು ಬುಟ್ಟಿಗಳು") ರಕ್ಷಿಸಿಟ್ಟಿರುವ ಪಾಲಿ ಭಾಷೆಯ ಜ್ಞಾನವೂ ನನಗಿಲ್ಲ. ಆದರೆ, ಹೆಸರಾಂತ ವಿದ್ವಾಂಸ ಬೌದ್ಧ ಭಿಕ್ಖುಗಳು ಬುದ್ಧರ ಬೋಧನೆಗಳ ಮೇಲೆ ಬರ್ಮೀಯ ಭಾಷೆಯಲ್ಲಿ ರಚಿಸಿರುವ ಗ್ರಂಥಗಳನ್ನು ತಕ್ಕಮಟ್ಟಿಗೆ ಅಧ್ಯಯನ ಮಾಡಿದ್ದೇನೆ. ನಾನು ಬುದ್ಧರ ಬೋಧನೆಗಳನ್ನು ಸೈದ್ಧಾಂತಿಕವಾಗಿ ನೋಡುವುದಕ್ಕಿಂತ ಹೆಚ್ಚಾಗಿ ಪ್ರಾಯೋಗಿಕವಾಗಿ ನೋಡುತ್ತೇನೆ. ಆದ್ದರಿಂದ ಬೋಧನೆಗಳ ಬಗ್ಗೆ ನಾನು ನಿಮಗೆ ಬೇರೆಲ್ಲೂ ಸುಲಭವಾಗಿ ಸಿಗದಿರುವಂತಹದನ್ನು ಕೊಡಲು ಶಕ್ತನಾಗಿದ್ದೇನೆ. ಆದರೆ ಸದ್ಯಕ್ಕೆ ನಾನು ಪ್ರಾಯೋಗಿಕ ಧರ್ಮದ ಕೇವಲ ಒಬ್ಬ ವಿದ್ಯಾರ್ಥಿ ಮಾತ್ರ. ಜೊತೆಗೆ ಪ್ರಕೃತಿಯ ಸ್ವಭಾವದ ಸತ್ಯವನ್ನು ಬುದ್ಧರ ಬೋಧನೆಗಳ ಮೂಲಕ ಕಲಿಯಲು ಪ್ರಯತ್ನಿಸುತ್ತಿರುವ ಪ್ರಯೋಗ ಪರೀಕ್ಷಕ ಕೂಡ ಹೌದು. ಇದನ್ನು ನಾನು ಒಬ್ಬ ಗೃಹಸ್ಥನಾಗಿ ಮತ್ತು ಸರ್ಕಾರದ ಜವಾಬ್ದಾರಿಯುತ ಅಧಿಕಾರಿಯಾಗಿ ನಿರ್ವಹಿಸಬೇಕಾಗಿದ್ದ ವಿವಿಧ ಕರ್ತವ್ಯಗಳ ಮಧ್ಯೆ ಲಭ್ಯವಿದ್ದ ಅಲ್ಪ ಸಮಯದಲ್ಲಿ ಮಾಡಬೇಕಾಗಿದ್ದರಿಂದ, ಪ್ರಗತಿಯು ಬಹಳ ನಿಧಾನವಾಗಿದೆ ಮತ್ತು ನಾನು ಏನನ್ನು ಹೇಳುತ್ತೇನೆಯೋ ಅದು ಸಂಪೂರ್ಣ ಸರಿ ಎಂದು ನಾನು ಪ್ರತಿಪಾದಿಸುವುದಿಲ್ಲ. ನಾನು ಸರಿಯಿರಬಹುದು ಅಥವಾ ತಪ್ಪಿರಬಹುದು. ಆದರೆ ನಾನು ಏನನ್ನಾದರೂ ಹೇಳಿದರೆ ಅದನ್ನು ಹೃತ್ಪೂರ್ವಕವಾಗಿ, ಸದುದ್ದೇಶದಿಂದ ಮತ್ತು ಬದ್ಧತೆಯಿಂದ ಹೇಳುತ್ತೇನೆ ಎಂದು ಆಶ್ವಾಸನೆ ನೀಡುತ್ತೇನೆ.

ಕಾಲಾಮ ಸುತ್ತದಲ್ಲಿ ಭಗವಾನ್ ಬುದ್ಧ ಹೇಳಿದರು :

* ನೀವು ಕೇಳಿರುವುದನ್ನು ನಂಬಬೇಡಿ

* ತಲತಲಾಂತರದಿಂದ ನಡೆದುಕೊಂಡು ಬಂದಿವೆ ಎಂಬ ಕಾರಣಕ್ಕೆ ಸಂಪ್ರದಾಯಗಳನ್ನು ನಂಬಬೇಡಿ ;

* ಅನೇಕ ಜನರು ಹೇಳಿದ್ದಾರೆ ಮತ್ತು ವದಂತಿ ಹಬ್ಬಿದೆ ಎಂಬ ಕಾರಣಕ್ಕೆ ಯಾವುದನ್ನೂ ನಂಬಬೇಡಿ;

* ಯಾವುದೋ ಸಂತರು ಹೇಳಿದ್ದು ಎಂಬ ಕಾರಣಕ್ಕೆ ಬರವಣಿಗೆಯಲ್ಲಿರುವ ಹೇಳಿಕೆಯನ್ನು ತೋರಿಸಿದರೆ ನಂಬಬೇಡಿ;

* ನಿರಾಧಾರವಾದ ಕಲ್ಪನೆಯನ್ನು ನಂಬಬೇಡಿ;

* ನೀವು ರೂಢಿ ಮಾಡಿಕೊಂಡು ಯಾವುದಕ್ಕೆ ಅಂಟಿಕೊಂಡಿದ್ದೀರೋ ಅದೇ ಸತ್ಯ ಎಂದು ನಂಬಬೇಡಿ;

* ಕೇವಲ ನಿಮ್ಮ ಹಿರಿಯರ ಮತ್ತು ಆಚಾರ್ಯರ ಅಧಿಕಾರವಾಣಿಯನ್ನು ನಂಬಬೇಡಿ.

ವೀಕ್ಷಿಸಿ ಮತ್ತು ವಿಶ್ಲೇಷಣೆ ಮಾಡಿದ ಮೇಲೆ, ಅದು ತಾರ್ಕಿಕವಾಗಿದೆ ಮತ್ತು ಪ್ರತಿಯೊಬ್ಬರಿಗೂ ಅನುಕೂಲಕರವಾಗಿದೆ ಎಂದು ಕಂಡುಬಂದಾಗ ಅದನ್ನು ಒಪ್ಪಿಕೊಳ್ಳಿ ಮತ್ತು ಅದರಂತೆಯೇ ಬದುಕಿ.

ಆದ್ದರಿಂದ, ನಾನು ತಾತ್ವಿಕ ವಿಷಯಗಳನ್ನು ಚರ್ಚಿಸಿದಾಗ, ಸರಿಯಾದ ತಾರ್ಕಿಕ ಚಿಂತನೆಯ ನಂತರ ಅಥವಾ ಪ್ರಾಯೋಗಿಕ ವಿಧಾನದಿಂದ ಅವು ನಿಮಗೆ ಮನವರಿಕೆಯಾದರೆ ಮಾತ್ರ ನನ್ನನ್ನು ನಂಬಿ ಎಂದು ಪ್ರಾರ್ಥಿಸುತ್ತೇನೆ.

ಕೆಟ್ಟದ್ದನ್ನು ಮಾಡಬೇಡ ; ಒಳ್ಳೆಯದನ್ನು ಮಾಡು; ಮನಸ್ಸನ್ನು ಶುದ್ಧಿ ಮಾಡಿಕೋ: ಇವು ಎಲ್ಲಾ ಬುದ್ಧರ ಬೋಧನೆಗಳು.

ಧಮ್ಮಪದದಿಂದ ತೆಗೆದುಕೊಂಡಿರುವ ಈ ಭಾಗವು ಸಂಕ್ಷಿಪ್ತವಾಗಿ ಬುದ್ಧರ ಬೋಧನೆಗಳ ಸಾರಸತ್ವವನ್ನು ನೀಡುತ್ತದೆ. ಇದು ಸರಳ ಎನಿಸುತ್ತದೆ. ಆದರೆ ಅಭ್ಯಾಸ ಮಾಡುವುದು ಬಹಳ ಕಷ್ಟ. ಬುದ್ಧರ ಬೋಧನೆಯನ್ನು ಆಚರಣೆಯಲ್ಲಿಡದ ಹೊರತು ಅದು ಸತ್ಯವಾಗಲು

ಸಾಧ್ಯವಿಲ್ಲ. ಬುದ್ಧ ಹೇಳಿದರು :

ನಾನು ಗ್ರಹಿಸಿದ ಸತ್ಯಗಳು ನನ್ನಿಂದ ಯಾರಿಗೆ ತಿಳಿಸಲ್ಪಟ್ಟಿವೆಯೋ ಅಂತಹ ನೀವು, ದೇವತೆಗಳ ಮತ್ತು ಮಾನವರ ಲಾಭಕ್ಕಾಗಿ ಮತ್ತು ಏಳಿಗೆಗಾಗಿ, ಪರಿಶುದ್ಧ ಧರ್ಮವನ್ನು ದೀರ್ಘಕಾಲದವರೆಗೆ ಉಳಿಸುವ ಮತ್ತು ಚಿರಸ್ಮರಣೀಯವಾಗಿಸುವ ಉದ್ದೇಶದಿಂದ ಅವುಗಳನ್ನು ಖಚಿತವಾಗಿ ನಿಮ್ಮವಾಗಿಸಿಕೊಳ್ಳಿ, ಅವುಗಳನ್ನು ಅಭ್ಯಾಸ ಮಾಡಿ, ಅವುಗಳ ಮೇಲೆ ಧ್ಯಾನ ಮಾಡಿ, ಅವುಗಳನ್ನು ಹೊರದೇಶಗಳಲ್ಲಿ ಹರಡಿ.

ಈ ಉಪನ್ಯಾಸದ ಪ್ರಧಾನ ವಿಷಯವಾದ ಬುದ್ಧರ ಬೋಧನೆಗಳ ಬಗ್ಗೆ ಹೇಳುವ ಮೊದಲು ನಾನು ತಮಗೆ ಗೌತಮ ಬುದ್ಧರ ಜೀವನಗಾಥೆಯ ಪರಿಚಯ ಮಾಡಿಸುತ್ತೇನೆ. ಈ ಉದ್ದೇಶಕ್ಕಾಗಿ ಬುದ್ಧರ ಕೆಲವು ಪರಿಕಲ್ಪನೆಗಳ ಹಿನ್ನೆಲೆಯನ್ನು ಕೊಡುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ. ನಿಮ್ಮಲ್ಲಿ ಬಹುತೇಕರಿಗೆ ಅವು ಪರಕೀಯವಾಗಿವೆ. ಆದ್ದರಿಂದ ಧಮ್ಮದಲ್ಲಿರುವ ಬ್ರಹ್ಮಾಂಡ, ಜಗತ್ತಿನ ವ್ಯವಸ್ಥೆ, 'ಇರುವಿಕೆ' ಯ ಸ್ತರಗಳು ಮುಂತಾದ ಪರಿಕಲ್ಪನೆಗಳ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಕೊಡಬಯಸುತ್ತೇನೆ. ಇವು ನಿಮ್ಮ ಆಲೋಚನೆಗೆ ಆಹಾರ ಒದಗಿಸುವುದರಲ್ಲಿ ಅನುಮಾನವಿಲ್ಲ. ಆದರೆ ಕೊನೆಯವರೆಗೂ ಶಾಂತರೀತಿಯಿಂದ ಕೇಳಿಸಿಕೊಳ್ಳಿ. ನಂತರ ನಿಮ್ಮ ಪ್ರಶ್ನೆಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

**ಬ್ರಹ್ಮಾಂಡ :** ಬ್ರಹ್ಮಾಂಡದ ಪರಿಕಲ್ಪನೆಯ ಸಾರಾಂಶವು ಈ ಮುಂದಿನಂತೆ ಇದೆ.

ನಾಮ ಮತ್ತು ರೂಪ (ಮನಸ್ಸು ಮತ್ತು ಶರೀರ)ಕ್ಕೆ ವಸತಿ ಕಲ್ಪಿಸಿರುವ 'ಓಕಾಸ ಲೋಕ' (ಆಕಾಶ ಲೋಕ)ವಿದೆ. ಈ ಲೌಕಿಕ ಪ್ರಪಂಚದಲ್ಲಿ, ಕಾರ್ಯ ಮತ್ತು ಕಾರಣದ ನಿಯಮದ ಪ್ರಭಾವದಿಂದ ನಾಮ ಮತ್ತು ರೂಪವು ಪ್ರಧಾನವಾಗಿದೆ. ಮುಂದಿನದು. 'ಸಂಖಾರ ಲೋಕ' (ಮನಸ್ಸಿನ ಶಕ್ತಿಗಳ ವಿಶ್ವ), ಸೃಷ್ಟಿಶೀಲ ಅಥವಾ ಸೃಷ್ಟಿಸಿದ್ದು. ಇದು ಮಾನಸಿಕ ಸ್ತರ, ದೈಹಿಕ ಕ್ರಿಯೆಗಳ ಮೂಲಕ ಬರುವ ಮನಸ್ಸಿನ ಸೃಜನಾತ್ಮಕ ಶಕ್ತಿಗಳು– ಮಾತುಗಳು ಮತ್ತು ಆಲೋಚನೆಗಳು. ಮೂರನೆಯದು ಮತ್ತು ಕೊನೆಯದು 'ಸತ್ತ ಲೋಕ' (ಸಚೇತನ ಜೀವಿಗಳ ವಿಶ್ವ). ಈ ಜೀವಿಗಳು ಮಾನಸಿಕ ಶಕ್ತಿಗಳ ಉತ್ಪನ್ನಗಳು. ವಾಸ್ತವವಾಗಿ ಈ ಮೂರನ್ನು ನಾವು "ಒಂದರಲ್ಲಿ ಮೂರು" ವಿಶ್ವಗಳು ಎಂದು ಕರೆಯಬಹುದು. ಏಕೆಂದರೆ ಒಂದನ್ನು ಮತ್ತೊಂದರಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಹೇಳಬೇಕೆಂದರೆ ಅವು ಒಂದಕ್ಕೊಂದು ಹೆಣೆದುಕೊಂಡಿವೆ ಮತ್ತು ಒಂದರೊಳಗೊಂದು ತೂರಿಕೊಂಡಿವೆ.

ನಿಮಗೆ ಅತ್ಯಂತ ಹೆಚ್ಚು ಆಸಕ್ತಿದಾಯಕವಾದುದು ಯಾವುದೆಂದರೆ "ಚಕ್ಕವಾಲ'ಗಳು (ಚಕ್ರವಾಲಗಳು) ಅಥವಾ ವಿಶ್ವ–ವ್ಯವಸ್ಥೆಗಳು; ಪ್ರತಿಯೊಂದು ವಿಶ್ವವು ಇರುವಿಕೆಯ ಮೂವತ್ತೊಂದು ಸ್ತರಗಳನ್ನು ಹೊಂದಿದೆ. ಪ್ರತಿ ವಿಶ್ವ–ವ್ಯವಸ್ಥೆಯು ಸೌರವ್ಯೂಹವನ್ನು ಹೊಂದಿರುವ ಮನುಷ್ಯ ಪ್ರಪಂಚ ಮತ್ತು ಇತರ 'ಇರುವಿಕೆ' ಯ ಸ್ತರಗಳಿಗೆ ಸಂವಾದಿಯಾಗಿದೆ. ಇಂತಹ ಲಕ್ಷ ಲಕ್ಷ ವಿಶ್ವ ವ್ಯವಸ್ಥೆಗಳಿವೆ, ನಿಸ್ಸಂಶಯವಾಗಿ ಲೆಕ್ಕವಿಲ್ಲದಷ್ಟು. ನಮಗೆ ಬಹಳ ಹತ್ತಿರವಿರುವ ಇಂತಹ ಹತ್ತು ಸಾವಿರ ವಿಶ್ವ ವ್ಯವಸ್ಥೆಗಳು ಬುದ್ಧರ ಜನ್ಮ ಕ್ಷೇತ್ರದೊಳಗಿವೆ. ಪ್ರಸಿದ್ಧವಾದ 'ಮಹಾಸಮಯ ಸುತ್ತ' (ಅದ್ಭುತವಾದ ಸಂದರ್ಭ) ಪ್ರವಚನವನ್ನು ಕಪಿಲವಸ್ತುವಿನ ಹತ್ತಿರವಿರುವ ಮಹಾವನದಲ್ಲಿ ಬುದ್ಧರು ನೀಡಿದಾಗ, ನಮ್ಮ ವಿಶ್ವವ್ಯವಸ್ಥೆಯ ಬ್ರಹ್ಮರು ಮತ್ತು ದೇವತೆಗಳು ಮಾತ್ರವಲ್ಲ, ಆ ಎಲ್ಲಾ ಹತ್ತು ಸಾವಿರ ವಿಶ್ವ ವ್ಯವಸ್ಥೆಗಳ ಬ್ರಹ್ಮರು ಮತ್ತು ದೇವತೆಗಳೂ ಬುದ್ಧರ ಬೋಧನೆಗಳನ್ನು ಕೇಳಿಸಿಕೊಳ್ಳಲು ಉಪಸ್ಥಿತರಿದ್ದರು. ಭಗವಾನ್ ಬುದ್ಧರು ತಮ್ಮ ಅಪರಿಮಿತ ಪ್ರೀತಿ ಮತ್ತು ಕರುಣೆಯಿಂದ ತುಂಬಿದ ಆಲೋಚನಾ ಅಲೆಗಳನ್ನು ತನ್ನ ಪ್ರಭಾವ ಕ್ಷೇತ್ರದಲ್ಲಿರುವ (ಆಣಾಖೆತ್ತಾ) ಇಂತಹ ನೂರು ಕೋಟಿ ವಿಶ್ವ ವ್ಯವಸ್ಥೆಗಳಲ್ಲಿರುವ ಸಚೇತನ ಜೀವಿಗಳಿಗೆ ಸಪ್ಪ ಕಳುಹಿಸುವ ಶಕ್ತಿಯನ್ನು ಪಡೆದಿದ್ದರು. ಉಳಿದ ವಿಶ್ವ ವ್ಯವಸ್ಥೆಗಳು (ವಿಸಯ– ಖೆತ್ತಾ) ಎಲ್ಲೆಯಿಲ್ಲದ ಕ್ಷೇತ್ರದಲ್ಲಿವೆ. ಇದು ಬುದ್ಧರ ಆಲೋಚನಾ ಅಲೆಗಳನ್ನು ಮೀರಿದ ಕ್ಷೇತ್ರ. ಬುದ್ಧರ ಈ ಪರಿಕಲ್ಪನೆಗಳಿಂದ ಇಡೀ ಬ್ರಹ್ಮಾಂಡದ ಗಾತ್ರವನ್ನು ನೀವು ಬಹಳ ಚೆನ್ನಾಗಿ ಕಲ್ಪಿಸಿಕೊಳ್ಳಬಹುದು.

ಓಕಾಸ ಲೋಕದಲ್ಲಿರುವ (ಆಕಾಶ ಲೋಕ) ನಮ್ಮ ಪ್ರಪಂಚದ ಭೌತಿಕ ಅಲ್ಲದೆ ಕೇವಲ ದಿಗಿಲುಪಡಿಸುತ್ತದೆ. ಮಾನವ ಪ್ರಪಂಚವು ಅಖಂಡವಾದ ಆಕಾಶದಲ್ಲಿ ಕೇವಲ ಒಂದು ಚುಕ್ಕೆ ಮಾತ್ರ.

ಈಗ ನಾನು ನಮ್ಮ ವಿಶ್ವವ್ಯವಸ್ಥೆಯಲ್ಲಿರುವ ಇರುವಿಕೆಯ ಮೂವತ್ತೊಂದು ಸ್ತರಗಳ ಬಗ್ಗೆ ಸ್ವಲ್ಪ ಮಾಹಿತಿ ಕೊಡುತ್ತೇನೆ. ಇದು ಇತರೆ ವಿಶ್ವ–ವ್ಯವಸ್ಥೆಗಳ ತರಹವೇ ಇದೆ. ಪ್ರಧಾನವಾಗಿ ಅವು ಈ ಕೆಳಗಿನಂತಿವೆ.

1) ಅರೂಪ ಲೋಕ– ಭೌತಿಕ ಶರೀರವಿಲ್ಲದ ಬ್ರಹ್ಮರ ಲೋಕ

2) ರೂಪ ಲೋಕ– ಸೂಕ್ಷ್ಮ ಭೌತಿಕ ಶರೀರವಿರುವ ಬ್ರಹ್ಮರ ಲೋಕ.

3) ಕಾಮ ಲೋಕ– ದೇವತೆಗಳ, ಮನುಷ್ಯರ ಮತ್ತು ಕೆಳ ಜೀವಿಗಳ ಲೋಕ. ಇಂದ್ರಿಯಗಳಿಗೆ ಅಪ್ಯಾಯಮಾನವಾದ ಲೋಕ.

ಅರೂಪ ಲೋಕವು ಭೌತಿಕ ಶರೀರವಿಲ್ಲದ ನಾಲ್ಕು ಬ್ರಹ್ಮಲೋಕಗಳನ್ನು ಒಳಗೊಂಡಿದೆ. ರೂಪ ಲೋಕವು ಸೂಕ್ಷ್ಮ ಶರೀರದ ಸ್ಥಿತಿಯಿರುವ ಹದಿನಾರು ಬ್ರಹ್ಮಲೋಕಗಳಿಂದ ಕೂಡಿದೆ. ಕಾಮ ಲೋಕವು ಈ ಮುಂದಿನವುಗಳನ್ನು ಒಳಗೊಂಡಿದೆ.

ಎ) ಆರು ದೇವಲೋಕಗಳು. ಅವು ಯಾವುವೆಂದರೆ,

1) ಚಾತುಮಹಾರಾಜಿಕ 2) ತಾವತಿಂಸ 3) ಯಾಮಾ 4) ತುಸಿತಾ 5) ನಿಮ್ಮಾಣರತಿ 6) ಪರಿನಿಮ್ಮಿತ–ವಾಸವತ್ತೀ

ಬಿ) ಮಾನವ ಲೋಕ

ಸಿ) ನಾಲ್ಕು ಕೆಳಗಿನ ಲೋಕಗಳು, ಅವೆಂದರೆ

1) ನಿರಯ (ನರಕ) 2) ತಿರಚ್ಛಾನ (ಪ್ರಾಣಿಲೋಕ)

3) ಪೇತ (ಪ್ರೇತ ಲೋಕ) 4) ಅಸುರ (ರಾಕ್ಷಸ ಲೋಕ)

ಈ ಇರುವಿಕೆಯ ಸ್ತರಗಳು, ಮನಸ್ಸು ಉತ್ಪಾದಿಸುವ ಮನಸ್ಸಿನ ಶಕ್ತಿಗಳ ಪ್ರಕಾರ ಅಥವಾ ಸಂಕಲ್ಪಿತ ಸರಣಿ ಕ್ರಿಯೆಗಳು, ಮಾತುಗಳು ಮತ್ತು ಆಲೋಚನೆಗಳ ಪ್ರಕಾರ ಶುದ್ಧವಾಗಿ ಅಥವಾ ಅಶುದ್ಧವಾಗಿ, ತಂಪಾಗಿ ಅಥವಾ ಶಾಖದಿಂದ, ಬೆಳಕಿನಿಂದ ಅಥವಾ ಕತ್ತಲೆಯಿಂದ, ಹಗುರ ಅಥವಾ ಭಾರವಾಗಿ ಹಿತಕರವಾಗಿ ಅಥವಾ ಭಯಾನಕವಾಗಿ ಇರುತ್ತವೆ. ಉದಾಹರಣೆಗೆ ಜೀವಿಗಳ ಇಡೀ ಬ್ರಹ್ಮಾಂಡವನ್ನು ಅಪರಿಮಿತ ಪ್ರೀತಿ ಮತ್ತು ಕರುಣೆಯಿಂದ ತುಂಬುವ ಒಬ್ಬ ಧಾರ್ಮಿಕ ವ್ಯಕ್ತಿಯ ವಿಷಯವನ್ನು ತೆಗೆದುಕೊಳ್ಳಿ. ಅವರು ಪರಿಶುದ್ಧವಾದ, ತಂಪಾದ, ಪ್ರಕಾಶಮಾನವಾದ, ಬೆಳಕಿನ ಮತ್ತು ಹಿತಕರವಾದಂತಹ ಮಾನಸಿಕ ಶಕ್ತಿಗಳನ್ನು ಉತ್ಪನ್ನ ಮಾಡುತ್ತಿರಲೇಬೇಕು. ಈ ಶಕ್ತಿಯ ತರಂಗಗಳು ಸಹಜವಾಗಿ ಬ್ರಹ್ಮಲೋಕಗಳಲ್ಲಿ ವಿರಮಿಸುತ್ತವೆ. ಇದಕ್ಕೆ ವಿರುದ್ಧವಾದ ಒಬ್ಬ ಕೋಪಿಷ್ಠ ಅಥವಾ ಅತೃಪ್ತ ವ್ಯಕ್ತಿಯ ವಿಷಯವನ್ನು ಈಗ ನಾವು ತೆಗೆದುಕೊಳ್ಳೋಣ. "ಮುಖವು ಮನಸ್ಸನ್ನು ಪ್ರತಿಬಿಂಬಿಸುತ್ತದೆ" ಎಂಬ ನಾಣ್ಣುಡಿಯಂತೆ, ಅವನ ಮನಸ್ಸಿನ ಅಶುದ್ಧತೆ, ಬಿಸಿ, ಕತ್ತಲೆ, ಭಾರ ಮತ್ತು ಕ್ರೂರತೆ ತಕ್ಷಣಕ್ಕೆ ವ್ಯಕ್ತಿಯಲ್ಲಿ ಪ್ರತಿಬಿಂಬಿತವಾಗುತ್ತದೆ, ತೆರೆದ ಕಣ್ಣಿಗೇ ಕಾಣುತ್ತದೆ. ಇದು ಕೆಟ್ಟ ಮಾನಸಿಕ ಶಕ್ತಿಯಾದ ಕೋಪವನ್ನು ಉತ್ಪತ್ತಿ ಮಾಡಿಕೊಂಡದ್ದರ ಫಲ ಎಂದು ನಾನು ಹೇಳುತ್ತೇನೆ. ಇದು ಇರುವಿಕೆಯ ಕೆಳಲೋಕಕ್ಕೆ ಹೋಗುತ್ತದೆ. ಲೋಭ(ದುರಾಸೆ) ಅಥವಾ ಮೋಹ (ಅಜ್ಞಾನ) ದಂತಹ ಮಾನಸಿಕ ಶಕ್ತಿಗಳ ಕಥೆಯೂ ಇದೇ ಆಗಿದೆ. ಭಕ್ತಿ, ನೈತಿಕ ಮತ್ತು ದಾನದಂತಹ ಪುಣ್ಯದ ಕೆಲಸಗಳು ಭವಿಷ್ಯದಲ್ಲಿ ಒಳ್ಳೆಯದಾಗಲಿ ಎಂಬ ಉದ್ದೇಶವನ್ನು ಹೊಂದಿದ್ದರೆ, ಉತ್ಪತ್ತಿಯಾದ ಮಾನಸಿಕ ಶಕ್ತಿಗಳು ಸಹಜವಾಗಿಯೇ ದೇವತೆಗಳು ಮತ್ತು ಮಾನವರು ಇರುವ ಕಾಮ ಲೋಕ ದಲ್ಲಿರುತ್ತವೆ. ಮಹನೀಯರೇ ಮತ್ತು ಮಹಿಳೆಯರೇ. ಇವು ನಾನು ಈಗ ಪ್ರಸ್ತುತಪಡಿಸಲು ಪ್ರಾರಂಭಿಸುವ ಬುದ್ಧರ ಜೀವನ ಕಥನಕ್ಕೆ ಸಂಬಂಧಿಸಿದ ಕೆಲವು ಪರಿಕಲ್ಪನೆಗಳು.

**ಸಿದ್ಧತೆ** : ಭದ್ದ–ಕಪ್ಪ ಎಂದು ಪ್ರಸಿದ್ಧವಾದ ವಿಶ್ವ ಚಕ್ರದಲ್ಲಿ ಹುಟ್ಟಿ ಬರುವ ಐದು ಬುದ್ಧರಲ್ಲಿ ಗೌತಮ ಬುದ್ಧರು ನಾಲ್ಕನೆಯವರು. ಅವರಿಗಿಂತ ಮೊದಲಿನ ಬುದ್ಧರು ಕಕುಸಂಧ, ಕೋಣಾಗಮನ ಮತ್ತು ಕಸ್ಸಪ. ಹಿಂದಿನ ಯುಗಗಳಲ್ಲಿ ಲೆಕ್ಕವಿಲ್ಲದಷ್ಟು ಬುದ್ಧರು ಬಂದಿದ್ದಾರೆ ಮತ್ತು ಅವರೂ ಸಹ ನೋವು ಮತ್ತು ಸಾವಿನ ದುಃಖದಿಂದ ಮುಕ್ತಿ

ಕೊಡುವ ಇದೇ ಧರ್ಮವನ್ನು ಬೋಧಿಸಿದರು. ಎಲ್ಲಾ ಬುದ್ಧರು ಮಹಾ ಕರುಣಾಮಯಿಗಳು, ಮಹಿಮಾನ್ವಿತರು ಮತ್ತು ಜ್ಞಾನೋದಯವನ್ನು ಪಡೆದವರು.

ಸುಮೇಧ ಎಂಬ ಹೆಸರಿನ ಸಂನ್ಯಾಸಿಯು ದೀಪಾಂಕರ ಬುದ್ಧರಿಂದ ಪ್ರೇರಣೆ ಪಡೆಯುತ್ತಾರೆ. ಕಾಲಾನಂತರದಲ್ಲಿ ಬುದ್ಧತ್ವ ಪಡೆಯುವುದಕ್ಕೆ ಬೇಕಾದ ತಯಾರಿ ಮಾಡಿಕೊಳ್ಳುವ ಪ್ರತಿಜ್ಞೆ ಮಾಡುತ್ತಾರೆ. ಬುದ್ಧ ದೀಪಾಂಕರ ಅವರನ್ನು ಆಶೀರ್ವದಿಸಿ, ಗೌತಮ ಎಂಬ ಹೆಸರಿನಿಂದ ಇವರು ಬುದ್ಧ ಆಗುತ್ತಾರೆ ಎಂದು ಭವಿಷ್ಯ ನುಡಿದರು. ತದನಂತರ ಜನ್ಮದಿಂದ ಜನ್ಮಕ್ಕೆ ಬೋಧಿಸತ್ವರು ಅಂದರೆ ಭವಿಷ್ಯದಲ್ಲಿ ಬುದ್ಧ ಆಗುವವರು ಹತ್ತು ಪಾರಮಿಗಳನ್ನು (ಪರಿಪೂರ್ಣತೆಗಳನ್ನು) ಅಭ್ಯಾಸ ಮಾಡುವ ಮೂಲಕ ಅತ್ಯುನ್ನತ ಮಾನಸಿಕ ಶಕ್ತಿಗಳನ್ನು ರಕ್ಷಿಸಿಟ್ಟುಕೊಂಡರು. ಈ ಹತ್ತು ಪಾರಿಮಿಗಳು ಅಥವಾ ಪರಿಪೂರ್ಣತೆಗೆ ಬೇಕಾದ ಗುಣಗಳು ಯಾವುವೆಂದರೆ :

1) ದಾನ (ದಾನ ಕೊಡುವ ಗುಣ), 2) ಶೀಲ (ನೈತಿಕತೆ) 3) ನೆಕ್ಖಮ್ಮ (ಪರಿತ್ಯಾಗ), 4) ಪನ್ನಾ (ವಿವೇಕ, ಅನುಭವ ಜ್ಞಾನ), 5) ವಿರಿಯ (ಪ್ರಯತ್ನ), 6. ಖಂತಿ (ಸಹನೆ, ತಾಳ್ಮೆ), 7) ಸಚ್ಚ(ಸತ್ಯ), 8) ಅದಿಟ್ಠಾನ (ದೃಢನಿಶ್ಚಯ), 9) ಮೆತ್ತಾ (ಎಲ್ಲದನ್ನೂ ಒಳಗೊಳ್ಳುವ ಪ್ರೀತಿ), 10 ಉಪೆಕ್ಖಾ(ಸಮತೆ).

ಆದ್ದರಿಂದ, ಬುದ್ಧ ಆಗುವುದು ಬಹಳ ಕಷ್ಟದ ಕೆಲಸ. ಅದರ ಬಗ್ಗೆ ಚಿಂತಿಸುವುದಕ್ಕೇ ಅತ್ಯಂತ ಹೆಚ್ಚಿನ ಇಚ್ಛಾಶಕ್ತಿಯ ಬಲಬೇಕಾಗುತ್ತದೆ. ರಾಜವೆಸ್ಸಂತರ ಜನ್ಮದೊಂದಿಗೆ ಬೋಧಿಸತ್ವರ ಸಿದ್ಧತೆಯ ಅವಧಿ ಕೊನೆಗೊಳ್ಳುತ್ತದೆ. ದಾನಕೊಡುವುದರಲ್ಲಿ ರಾಜವೆಸ್ಸಂತರನನ್ನು ಮೀರಿಸುವ ಯಾವುದೇ ಜೀವಿಯು ಇರಲಿಲ್ಲ. ಬುದ್ಧ ದೀಪಾಂಕರರ ಮುಂದೆ ಮಾಡಿದ ತನ್ನ ಪ್ರತಿಜ್ಞೆಯನ್ನು ಈಡೇರಿಸಲು ಈ ರಾಜ ತನ್ನ ರಾಜ್ಯ, ತನ್ನ ಹೆಂಡತಿ ಮತ್ತು ಮಕ್ಕಳನ್ನು ಮತ್ತು ತನ್ನ ಎಲ್ಲಾ ಪ್ರಾಪಂಚಿಕ ಸಂಪತ್ತನ್ನು ದಾನಕೊಡುತ್ತಾನೆ. ನಂತರ ದೇವಲೋಕಗಳಲ್ಲಿ ಒಂದಾದ 'ತುಸಿತಾ' ದೇವಲೋಕದಲ್ಲಿ, ಮಹಿಮೆಯುಳ್ಳ ಸೇತಕೇತುದೇವ ಆಗಿ ಜನ್ಮವೆತ್ತುತ್ತಾನೆ. ಕಪಿಲವಸ್ತುವಿನ ರಾಜ ಸುದ್ಧೋಧನನ ರಾಣಿ ಮಯಾದೇವಿಯ ಗರ್ಭ ಪ್ರವೇಶಿಸಲು 'ತುಸಿತಾ' ಲೋಕವನ್ನು ತ್ಯಜಿಸುತ್ತಾನೆ.

ಹೆರಿಗೆಯ ಸಮಯ ಹತ್ತಿರ ಬರುತ್ತಿದ್ದಂತೆ, ರಾಣಿಯು ಪ್ರಸವಕ್ಕಾಗಿ ತನ್ನ ತವರು ಮನೆಗೆ ಹೋಗುವ ಇಂಗಿತವನ್ನು ವ್ಯಕ್ತಪಡಿಸುತ್ತಾಳೆ. ಉಚಿತವಾದ ಪರಿವಾರ ಮತ್ತು ರಕ್ಷಣೆಯೊಂದಿಗೆ ರಾಜಸುದ್ಧೋಧನನು ರಾಣಿಯನ್ನು ಕಳುಹಿಸಿಕೊಡುತ್ತಾನೆ. ಮಾರ್ಗ ಮಧ್ಯದಲ್ಲಿ ಲುಂಬಿಣಿಯ ಸಾಲವೃಕ್ಷದ ವನದಲ್ಲಿ ವಿಶ್ರಮಿಸಿಕೊಳ್ಳಲು ನಿಲ್ಲುತ್ತಾರೆ. ಮೇನೆಯಿಂದ ಕೆಳಗಿಳಿದು ತಣ್ಣನೆಯ ಗಾಳಿ ಮತ್ತು ಸಾಲವೃಕ್ಷಗಳ ಹೂವಿನ ಪರಿಮಳವನ್ನು ರಾಣಿಯು ಆನಂದಿಸುತ್ತಾಳೆ. ಬಲಗೈಯಲ್ಲಿ ಸಾಲವೃಕ್ಷದ ಕೊಂಬೆಯನ್ನು ಹಿಡಿದು ಹೂವನ್ನು ಕಿತ್ತುಕೊಳ್ಳುವಾಗ, ಇದ್ದಕ್ಕಿದ್ದಂತೆ ಮತ್ತು ಅನಿರೀಕ್ಷಿತವಾಗಿ ಮುಂದೆ ಸಂಪೂರ್ಣ ಜ್ಞಾನೋದಯ ಪಡೆದು ಬುದ್ಧ ಆಗುವ ಮಗನಿಗೆ ಜನ್ಮ ನೀಡುತ್ತಾಳೆ. ಆ ಕ್ಷಣದಲ್ಲಿ ಬ್ರಹ್ಮಾಂಡದಲ್ಲಿರುವ ಸ್ವಾಭಾವಿಕ ವ್ಯವಸ್ಥೆಯು ಅನೇಕ ವಿಧದಲ್ಲಿ ಕ್ರಾಂತಿಕಾರಕವಾಗಿ ಬದಲಾಯಿತು ಮತ್ತು ಮೂವತ್ತೆರಡು ಅದ್ಭುತವಾದ ವಿದ್ಯಮಾನಗಳು ಚೈತನ್ಯಗೊಂಡವು. ಎಲ್ಲಾ ಭೌತಿಕ ಜಗತ್ತುಗಳು ಅಡಿಪಾಯದವರೆಗೆ ಅಲ್ಲಾಡಿದವು. ಸೌರವ್ಯೂಹದಲ್ಲಿ ಅಸಾಧಾರಣವಾದ ಪ್ರಕಾಶಗಳು ಕಾಣಿಸಿಕೊಂಡವು. ಭೌತಿಕ ಸ್ತರದಲ್ಲಿ ಎಲ್ಲಾ ಜೀವಿಗಳೂ ಒಬ್ಬರನ್ನೊಬ್ಬರು ನೋಡಲು ಸಾಧ್ಯವಾಯಿತು. ಕಿವುಡರು ಕಿವುಡುತನದಿಂದ ಮುಕ್ತರಾದರು. ಮೂಕರಿಗೆ ಮಾತು ಬಂದಿತು. ಎಲ್ಲಾ ಕಡೆ ದೇವದುಂದುಭಿ ಮೊಳಗುವುದು ಮುಂತಾದ ಘಟನೆಗಳು ನಡೆದವು.

ಆ ಕ್ಷಣದಲ್ಲಿ, ರಾಜ ಸುದ್ಧೋಧನನ ಆಚಾರ್ಯರಾಗಿದ್ದ ಆಶ್ರಮವಾಸಿ ಕಾಲ ದೇವಲ ಅವರು 'ತಾವತಿಂಸ' ಲೋಕದ ದೇವತೆಗಳಿಗೆ ಪ್ರವಚನ ನೀಡುತ್ತಿದ್ದರು. ಸುಪ್ರಸಿದ್ಧರಾದ ಆಶ್ರಮವಾಸಿಗಳಾದ ಇವರು ಎಂಟು ಸಾಧನೆಗಳನ್ನು (ಸಮಾಪತ್ತೀಸ್) ಕರಗತ ಮಾಡಿಕೊಂಡಿದ್ದರು. ಇದು ಅವರಿಗೆ ಅಸಾಧಾರಣ ಶಕ್ತಿಯನ್ನು ನೀಡಿತ್ತು. ರಾಜನಿಗೆ ಗಂಡು ಮಗುವಾಗಿದ್ದನ್ನು ಮತ್ತು ಎಲ್ಲಾ ರೂಪ ಮತ್ತು ಕಾಮಲೋಕಗಳಲ್ಲಿ ಜೀವಿಗಳು ನಲಿದಾಡಿದ್ದನ್ನು ತಿಳಿದು ಅರಮನೆಗೆ ದೌಡಾಯಿಸಿದರು ಮತ್ತು ತಮ್ಮ ಆಶೀರ್ವಾದಕ್ಕಾಗಿ ಮಗುವನ್ನು ತರಲು ಸೂಚಿಸಿದರು. ಇದಕ್ಕಾಗಿ ರಾಜನು ಮಗುವನ್ನು ತನ್ನ ಆಚಾರ್ಯರ ಕೈಗೆ ನೀಡಿದ. ಈ ಮಗುವು ಬುದ್ಧ ಆಗುವುದರಲ್ಲಿ ಸಂಶಯವಿಲ್ಲ ಎಂಬುದನ್ನು ದೇವಲ ತಕ್ಷಣ ಮನಗಂಡರು. ಈ ಅರಿವಿನಿಂದ ಅವರ ಮುಖದಲ್ಲಿ ನಗು ಅರಳಿತು. ಆದರೆ ತಕ್ಷಣವೇ ಅವರು ಅತ್ತರು. ಏಕೆಂದರೆ ಬುದ್ಧರ ಬೋಧನೆಗಳನ್ನು ಕೇಳಲು ಅವರು ಬದುಕಿರುವುದಿಲ್ಲ ಮತ್ತು ಸತ್ತ ನಂತರ ಅರೂಪ ಬ್ರಹ್ಮ ಲೋಕದಲ್ಲಿ ಜನಿಸುವುದರಿಂದ ಭೌತಿಕ ಜಗತ್ತಿನೊಡನೆ ಯಾವುದೇ ಸಂಪರ್ಕವಿರುವುದಿಲ್ಲ. ಬುದ್ಧರನ್ನು ಕಾಣುವ ಮತ್ತು ಅವರ ಬೋಧನೆಗಳನ್ನು ಕೇಳುವ ಭಾಗ್ಯ ಅವರಿಗೆ ಇಲ್ಲವಾಯಿತು.

ಐದನೆಯ ದಿನ ಹೆಸರಾಂತ ಜ್ಯೋತಿಷಿಗಳ ಸಮ್ಮುಖದಲ್ಲಿ ಮಗುವಿಗೆ ಸಿದ್ಧಾತ್ಥ(ಸಿದ್ಧಾರ್ಥ) ಎಂದು ನಾಮಕರಣ ಮಾಡಿದರು. ಭವಿಷ್ಯದಲ್ಲಿ ಬುದ್ಧ ಆಗುವ ಎಲ್ಲಾ ಗುಣಗಳನ್ನು ಮಗು ಹೊಂದಿದೆ ಎಂಬುದನ್ನು ಎಲ್ಲಾ ಜ್ಯೋತಿಷಿಗಳು ಒಪ್ಪಿಕೊಂಡರು. ಆದರೆ ಹೆರಿಗೆಯಾದ ಒಂದು ವಾರದಲ್ಲಿ ರಾಣಿಯು ಮರಣಹೊಂದಿದರು. ಮಗುವಿನ ಚಿಕ್ಕಮ್ಮ, ಪ್ರಜಾಪತೀ ಗೋತಮಿ ಮಗುವನ್ನು ಸಾಕುವ ಹೊಣೆ ಹೊತ್ತರು.

ತನ್ನ ಜೀವನದ ಆರಂಭದ ವರ್ಷಗಳನ್ನು ಸಿದ್ಧಾರ್ಥ ಆಟ ಆಡುತ್ತಾ, ವೈಭವದಲ್ಲಿ ಮತ್ತು ಸಂಸ್ಕೃತಿ ಬೆಳೆಸಿಕೊಳ್ಳುವುದರಲ್ಲಿ ಕಳೆದ. ಬುದ್ಧಿವಂತಿಕೆಯಲ್ಲಿ ಮತ್ತು ಬಲದಲ್ಲಿ ತನ್ನ ವಯಸ್ಸಿಗೆ ಮೀರಿದ ಪ್ರೌಢಿಮೆಯನ್ನು ಹೊಂದಿದ್ದ ಎಂದು ಪ್ರಶಂಸಿಸಲ್ಪಟ್ಟ. ಅವನನ್ನು ಸುಖವಾಗಿಡಲು ರಾಜನು ತನ್ನ ಶಕ್ತಿಮೀರಿ ಪ್ರಯತ್ನಿಸುತ್ತಿದ್ದ. ಪ್ರತಿ ಋತುವಿಗೂ ಸರಿಹೊಂದುವಂತಹ ಮೂರು ಋತುಗಳಿಗೆ ಮೂರು ಅರಮನೆಗಳನ್ನು ನಿರ್ಮಿಸಲಾಯಿತು. ರಾಜಕುಮಾರನು ಇಂದ್ರಿಯ ಸುಖಗಳಲ್ಲಿ ಮುಳುಗಲು ಬೇಕಾದ ಎಲ್ಲಾ ಅವಶ್ಯಕತೆಗಳನ್ನೂ ಇಲ್ಲಿ ಕಲ್ಪಿಸಲಾಯಿತು. ಏಕೆಂದರೆ, ತನ್ನ ಮಗನು ಜ್ಞಾನೋದಯ ಪಡೆದ ಬುದ್ಧ ಆಗುವುದಕ್ಕಿಂತ ರಾಜನಾಗಿ ಪ್ರಾಪಂಚಿಕ ಜೀವನದಲ್ಲಿಯೇ ಇರಬೇಕೆಂಬುದು ರಾಜನ ಅಪೇಕ್ಷೆಯಾಗಿತ್ತು. ತನ್ನ ಮಗನು ಉನ್ನತವಾದ ತಾತ್ವಿಕ ಚಿಂತನೆಗಳ ವಾತಾವರಣದ ಹತ್ತಿರವೂ ಸುಳಿಯದಿರುವಂತೆ ರಾಜ ಸುದ್ಧೋಧನನು ಕಣ್ಗಾವಲಿಟ್ಟಿದ್ದ. ರಾಜಕುಮಾರನ ಆಲೋಚನೆಯು ಈ ದಿಕ್ಕಿನೆಡೆಗೆ ತಿರುಗದಿರುವಂತೆ ವ್ಯವಸ್ಥೆ ಮಾಡಲಾಗಿತ್ತು. ರಾಜಕುಮಾರನ ಜೊತೆಯಿರುವವರು ಅಥವಾ ಅವನ ಸೇವೆ ಮಾಡುವವರು, ಮುಪ್ಪು, ರೋಗರುಜಿನಿ ಮತ್ತು ಸಾವಿನ ಬಗ್ಗೆ ತುಟಿ ಬಿಚ್ಚದಂತೆ ಆಜ್ಞಾಪಿಸಲಾಗಿತ್ತು. ಈ ಜಗತ್ತಿನಲ್ಲಿ ಅಹಿತಕರವಾದ ಸಂಗತಿಗಳೇ ಇಲ್ಲವೆಂಬಂತೆ ಅವರು ನಡೆದುಕೊಳ್ಳಬೇಕಿತ್ತು. ಮುಪ್ಪು, ದುರ್ಬಲತೆ ಅಥವಾ ಕಾಯಿಲೆಯ ಅತ್ಯಂತ ಸಣ್ಣ ಸೂಚನೆ ಇರುವ ಸೇವಕರು ಮತ್ತು ಸಹಾಯಕರನ್ನು ಬದಲಾಯಿಸಲಾಗುತ್ತಿತ್ತು. ಅವನನ್ನು ಸಂಪೂರ್ಣವಾಗಿ ಇಂದ್ರಿಯ ಸುಖಗಳಲ್ಲಿ ಇಡುವ ಉದ್ದೇಶದಿಂದ ನೃತ್ಯ, ಸಂಗೀತದಂತಹ ಆನಂದದಾಯಕ ಕಾರ್ಯಗಳನ್ನು ದಿನವಿಡೀ ನಡೆಸಲಾಗುತ್ತಿತ್ತು.

**ಮಹಾಪರಿತ್ಯಾಗ** : ದಿನಗಳು, ತಿಂಗಳುಗಳು ಮತ್ತು ವರ್ಷಗಳು ಕಳೆದಂತೆ, ಇಂದ್ರಿಯ ಸುಖಗಳ ವಾತಾವರಣದ ಏಕತಾನತೆಯು ಕ್ರಮೇಣವಾಗಿ ರಾಜಕುಮಾರ ಸಿದ್ಧಾರ್ಥನ ಮನಸ್ಸಿನ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತದೆ. ಬುದ್ಧತ್ವದ ಅದ್ಭುತ ಗುರಿಗಾಗಿ ಈ ಹಿಂದಿನ ಲೆಕ್ಕವಿಲ್ಲದಷ್ಟು ಜನ್ಮಗಳಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದ ಒಳ್ಳೆಯ ಗುಣಗಳ ಮನಸ್ಸಿನ ಶಕ್ತಿಗಳು ತನ್ನಷ್ಟಕ್ಕೇ ತಾನೇ ಉದ್ದೀಪನಗೊಂಡವು. ಕೆಲವು ವೇಳೆ, ಇಂದ್ರಿಯ ಸುಖಗಳ ಪ್ರಪಂಚವು ಅವನ ಮೇಲೆ ನಿಯಂತ್ರಣ ಕಳೆದುಕೊಂಡಾಗ, ಅವನ ಅಂತರಾತ್ಮವು ಕೆಲಸ ಮಾಡಲು ಪ್ರಾರಂಭಿಸಿ, ಸಮಾಧಿಯ ಶಕ್ತಿಯಿಂದ ಅವನ ಮನಸ್ಸನ್ನು ಪರಿಶುದ್ಧ ಮತ್ತು ಸಮತೆಯ ಸ್ಥಿತಿಗೆ ಕೊಂಡೊಯ್ಯುತ್ತಿತ್ತು. ಮನೋಸ್ಥೈರ್ಯದ ಯುದ್ಧ ಆರಂಭವಾಯಿತು.

ಇಂದ್ರಿಯ ಸುಖ ಮತ್ತು ಭಾವೋದ್ರೇಕದಿಂದ ಪಾರಾಗುವುದು ಅವನ ಮೊದಲ ಚಿಂತನೆಯಾಗಿತ್ತು. ಅರಮನೆಯ ಗೋಡೆಗಳಾಚೆ ಏನಿದೆ ಎಂಬುದನ್ನು ತಿಳಿಯಬಯಸಿದ. ಅದುವರೆಗೆ ಒಮ್ಮೆಯೂ ಅವನು

**RNI. No. : KARKAN/2015/68727. Postal Regn. No.: RNP/KA/BGS/2253/2020-22**
**Published On 10th & Posted On 20th of Every Month. Posted At : Bengaluru PSO, B'luru 26. Price(Annual)Rs.30.**

ಹೊರಹೋಗಿರಲಿಲ್ಲ. ಪ್ರಕೃತಿಯು ಹೇಗಿದೆಯೋ ಹಾಗೆಯೇ ನೋಡ ಬಯಸಿದ, ಮನುಷ್ಯ ಅದನ್ನು ಮಾಡಿದಂತೆ ಇರುವುದನ್ನಲ್ಲ. ಈ ಪ್ರಕಾರವಾಗಿ ಅರಮನೆಯ ಗೋಡೆಗಳಿಂದಾಚೆ ಇರುವ ರಾಜೋದ್ಯಾನ ವನ್ನು ನೋಡಲು ತೀರ್ಮಾನಿಸಿದ. ಪಾರ್ಕಿಗೆ ಹೋಗುವ ದಾರಿಯಲ್ಲಿ ಯಾವುದೇ ಅಹಿತಕರ ದೃಶ್ಯಗಳು ರಾಜಕುಮಾರನ ಕಣ್ಣಿಗೆ ಬೀಳದಿರುವಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ರಾಜ ತೆಗೆದುಕೊಂಡಿದ್ದ. ಆದರೂ ಮೊದಲ ಭೇಟಿಯಲ್ಲಿಯೇ ಬೆನ್ನು ಬಾಗಿದ ಮುದುಕನನ್ನು ಕಂಡ. ನಂತರದ ಭೇಟಿಯಲ್ಲಿ ಕಾಯಿಲೆಯಿಂದ ನರಳುತ್ತಿರುವ ರೋಗಿಯನ್ನು ಕಂಡ. ಇದಾದ ನಂತರ ಮನುಷ್ಯನ ಹೆಣವನ್ನು ನೋಡಿದ. ಕೊನೆಯ ಭೇಟಿಯಲ್ಲಿ ಒಬ್ಬ ಸಂನ್ಯಾಸಿಯನ್ನು ನೋಡಿದ.

ಇವೆಲ್ಲವೂ ಅವನ ಮನಸ್ಸನ್ನು ಗಾಢ ಚಿಂತನೆಗೆ ಈಡುಮಾಡಿದವು. ಅವನ ಮನಸ್ಸಿನ ವರ್ತನೆ ಬದಲಾಯಿತು. ಅವನ ಮನಸ್ಸು ಮಲಿನತೆಗಳಿಂದ ಮುಕ್ತವಾಯಿತು ಮತ್ತು ಸಂಖಾರ ಲೋಕದಲ್ಲಿ (ಮಾನಸಿಕ ಶಕ್ತಿಗಳ ಸ್ತರ) ಸಂಗ್ರಹಿಸಿಕೊಂಡ ತನ್ನ ಸದ್ಗುಣಗಳ ಶಕ್ತಿಗಳ ಜೊತೆ ಜೋಡಿಸಲ್ಪಟ್ಟಿತು. ಇಷ್ಟೊತ್ತಿಗಾಗಲೇ ಅವನ ಮನಸ್ಸು ಅಡೆತಡೆಗಳಿಂದ ಮುಕ್ತವಾಗಿತ್ತು, ಶಾಂತವಾಗಿತ್ತು, ಪರಿಶುದ್ಧವಾಗಿತ್ತು ಮತ್ತು ಶಕ್ತಿಯುತ ವಾಗಿತ್ತು. ತನ್ನ ರಾಣಿಗೆ ಗಂಡು ಮಗು ಜನಿಸಿದ ರಾತ್ರಿ, ಅವನನ್ನು ಬಂಧಿಸಿಡಲು ಹೊಸ ಬಂಧನ ಸೃಷ್ಟಿಯಾದ ರಾತ್ರಿ ಇದೆಲ್ಲಾ ನಡೆಯಿತು. ಆದರೆ ಯಾವುದೂ ಅವನ ಮನಸ್ಸಿನ ಸಮತೋಲನವನ್ನು ತಪ್ಪಿಸದಂತೆ ಅವನು ರಕ್ಷಿಸಲ್ಪಟ್ಟಿದ್ದ. ದೃಢನಿರ್ಧಾರದ ಗುಣಗಳು ಗಟ್ಟಿ ನಿರ್ಧಾರ ಮಾಡುವಲ್ಲಿ ಕೆಲಸ ಮಾಡಿದವು ಮತ್ತು ಹುಟ್ಟು, ಮುಪ್ಪು, ನೋವು ಮತ್ತು ಸಾವಿನಿಂದ ಬಿಡುಗಡೆ ಪಡೆಯುವ ಮಾರ್ಗ ಹುಡುಕಲು ನಿರ್ಧರಿಸಿದ. ಈ ಮಹತ್ವಪೂರ್ಣ ನಿರ್ಧಾರ ಮಾಡಿದಾಗ ಮಧ್ಯರಾತ್ರಿ ಯಾಗಿತ್ತು. ಕಂಟಕ ಕುದುರೆಯನ್ನು ತಯಾರು ಮಾಡು ಎಂದು ತನ್ನ ಸೇವಕ ಚೆನ್ನನಿಗೆ ಹೇಳಿದ. ತನ್ನ ಹೆಂಡತಿ ಮತ್ತು ಆಗ ತಾನೇ ಹುಟ್ಟಿದ ಮಗುವನ್ನು ಕೊನೆ ಬಾರಿಗೆ ನೋಡಿ ರಾಜಕುಮಾರ ಸಿದ್ಧಾರ್ಥನು ಕುಟುಂಬದ ಮತ್ತು ಪ್ರಪಂಚದ ಎಲ್ಲಾ ಬಂಧನಗಳನ್ನು ಕಳಚಿ ಮಹಾತ್ಯಾಗ ಮಾಡಿದ. ಪಟ್ಟಣವನ್ನು ದಾಟಿ, ಗುರಿ ಸಾಧಿಸುವವರೆಗೆ ಹಿಂದಿರುಗದಿರುವ ನಿರ್ಧಾರದೊಡನೆ ಅನೋಮಾ ನದಿಯನ್ನು ದಾಟಿದ.

....ಮುಂದುವರಿಯುವುದು.

### ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು** : 2021 : ಜೂನ್ 16–27, 30–11 ಜುಲೈ, 14–25, 28–8 ಆಗಸ್ಟ್ 11–22, 26–6 ಸೆಪ್ಟೆಂಬರ್ 11–19, 22–3 ಅಕ್ಟೋಬರ್, 7–18, 20–31. ನವೆಂಬರ್ 3–14, 17–28, ಡಿಸೆಂಬರ್ 1–12, 15–26.

**2 ದಿನದ ಶಿಬಿರ : ಜೂನ್ 11–13. ಸತಿಪಟ್ಠಾನ ಶಿಬಿರ : ಜೂನ್ 1–9, ಸೆಪ್ಟಂಬರ್ 11–19. ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್) ನಗರ ಸಾರಿಗೆ ಬಸ್ ಸಂಖ್ಯೆ : 256, 258, 258 ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್** : info@paphulla.dhamma.org;website : www. vridhamma.org.

### ಧಮ್ಮ ಖೆತ್ತಾ, ಹೈದರಾಬಾದ್

**10 ದಿನದ ಶಿಬಿರಗಳು :** 2021 : ಜುಲೈ 21–1 ಆಗಸ್ಟ್ 2–15, 18–29, ಸೆಪ್ಟಂಬರ್ 1–12, ಅಕ್ಟೋಬರ್ 6–17, 20–31, ನವೆಂಬರ್ 3–14, 17–28, 30–11 ಡಿಸೆಂಬರ್.

**10 ದಿನದ ವಿಶೇಷ ಶಿಬಿರ** : ಜೂನ್ 2–13. ***20 ದಿನದ ಶಿಬಿರ :*** ಜೂನ್ 2–23. ***30 ದಿನದ ಶಿಬಿರ :*** ಜೂನ್ 2–3 ಜುಲೈ. ***45 ದಿನದ ಶಿಬಿರ :*** ಜೂನ್ 2–18 ಜುಲೈ. **ವಿಳಾಸ** : ಅಂತರರಾಷ್ಟ್ರೀಯ ವಿಪಶ್ಯನ ಧ್ಯಾನ ಕೇಂದ್ರ, ಇಬ್ರಾಯಿಂ ಪಟ್ನಂ ರಸ್ತೆ, ಗುರ್ರಂಗುಡ ಬಸ್ ನಿಲ್ದಾಣ, ಹೈದರಾಬಾದ್. ಇಮೇಲ್: info@khetta. dhamma.org. ಫೋನ್ (+91) (40) 24240290 ಮೊಬೈಲ್ (ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ಮಾತ್ರ (+91) 94915 94247

### ಧಮ್ಮ ನಾಗಾಜ್ಜುನ, ನಾಗಾರ್ಜುನ ಸಾಗರ್, ತೆಲಂಗಾಣ

2021 : 10 ದಿನದ ಶಿಬಿರಗಳು : ಜುಲೈ7–18, 21–1 ಆಗಸ್ಟ್ 4–15, 18–29, ಸೆಪ್ಟಬರ್ 1–12, 15–26 ಅಕ್ಟೋಬರ್ 6–17

**20 ದಿನದ ಶಿಬಿರ:** ಮೇ 5–26. **30 ದಿನದ ಶಿಬಿರ:** ಮೇ 5–05 ಜೂನ್, **45 ದಿನದ ಶಿಬಿರ :** ಅಕ್ಟೋಬರ್ 22–07 ಡಿಸೆಂಬರ್ 13–28 ಜನವರಿ 2022. **ವಿಳಾಸ :** ಹಿಲ್ ಕಾಲೋನಿ, ನಾಗಾರ್ಜುನ ಸಾಗರ, ನಲಗೊಂದ ಜಿಲ್ಲೆ, ತೆಲಂಗಾಣ–508 202. ಸಂಪರ್ಕ ಸಂಖ್ಯೆಗಳು :(+91)93484–56780 (ವಿಚಾರಣೆಗೆ). ನೋಂದಣಿಗೆ: (+91) 94401–39329, 949155 2288 (ಸಮಯ 10 ರಿಂದ 1ಗಂಟೆ ಮಾತ್ರ) E-mail:info@nagajjuna.dhamma.org.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ, ______________________

______________________

______________________